ಅಸಲು ದಾವೆ ಸಂಖ್ಯೆ 139/2015

ಪಿ.ಡಬ್ಲ್ಯೂ.01

(ಗೌರವಾನ್ವಿತ ಉಚ್ಚನ್ಯಾಯಾಲಯದ ಆದೇಶದಂತೆ, ಸಾಕ್ಷಿದಾರರನ್ನು Thermal Screening Test ಗೆ ಒಳಪಡಿಸಿ, ಸಾಕ್ಷಿದಾರರನ್ನು ನ್ಯಾಯಾಲಯದ ಕಟ್ಟಡದ ಒಳಗೆ ಬರಮಾಡಿಕೊಂಡಿದ್ದು, ಸಾಕ್ಷಿ ಪೆಟ್ಟಿಗೆಯಲ್ಲಿ ಸಾಕ್ಷಿ ನುಡಿಯಲು ಅನುಮತಿ ನೀಡಲಾಯಿತು.)

ಸಾಕ್ಷಿಗೆ ಇಂದು ದಿನಾಂಕ 10.08.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಕೆ ವಿ ಕೆ ವಕೀಲರಿಂದ

ದಾವಾ ಆಸ್ತಿ ಸ.ನಂ.199/2 ವಿಸ್ತೀರ್ಣ 03 ಗುಂಟೆ ಜಮೀನು ಸೋನುಬಾಯಿ ಗಂಡ ರುಕ್ಮಾಜಿ ಶೇರಖಾನೆ ಇವರ ಹೆಸರಿನಲ್ಲಿ ಇದ್ದ ಬಗ್ಗೆ 1998-99 ರಿಂದ 2000-2001 ರ ವರೆಗಿನ ಪಹಣಿಪತ್ರಿಕೆಯ ದೃಢೀಕೃತ ನಕಲು ಹಾಜರುಮಾಡಿದ್ದೇನೆ, ಇದನ್ನು **ನಿ.ಪಿ.1** ಎಂದು ಗುರ್ತಿಸಲಾಯಿತು. ನನ್ನ ಹೆಂಡತಿ ಮಲ್ಲುಬಾಯಿ ಇವರು ದಿನಾಂಕ 13.06.2017 ರಂದು ನನ್ನ ಹೆಸರಿಗೆ ವಿಶೇಷ ಮುಕ್ತ್ಯಾರ-ನಾಮಾ ನೀಡಿದ್ದು, ಸದರಿ ದಾಖಲೆಯ ಮೂಲಪ್ರತಿ ಹಾಜರುಮಾಡಿದ್ದೇನೆ, ಇದನ್ನು **ನಿ.ಪಿ.2** ಎಂದು ಗುರ್ತಿಸಲಾಯಿತು. ದಿನಾಂಕ 19.06.2017 ರ ನನ್ನ ಹೆಂಡತಿಯ ಎರಡು ವೈದ್ಯಕೀಯ ದಾಖಲೆಗಳನ್ನು ಹಾಜರುಮಾಡಿದ್ದೇನೆ, ಇವುಗಳನ್ನು ಒಟ್ಟಾಗಿ **ನಿ.ಪಿ.3** ಎಂದು ಗುರ್ತಿಸಲಾಯಿತು.

ಇನ್ನೂ ಹೆಚ್ಚಿನ ದಾಖಲೆಗಳನ್ನು ಗುರ್ತಿಸಲು ವಕೀಲರು ಸಮಯಾವಕಾಶ ಕೋರುತ್ತಾರೆ, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ., ಮುಧೋಳ